# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶಹಾಪೂರ.

## ಸಿ.ಸಿ. ನಂ. 850/2025

**ಫಿರ್ಯಾಧಿದಾರರುಃ** ಸರ್ಕಾರದ ಪರ ಆರಕ್ಷಕ ಉಪ ನಿರೀಕ್ಷಕರು ಭೀ-ಗುಡಿ ಪೊಲೀಸಠಾಣೆ.

**ಃಃ ವಿರುದ್ದ ಃಃ**

**ಆರೋಪಿ** ದೇವಪ್ಪ ತಂದೆ ಕೋಲಕಾರ, ವಯಸ್ಸುಃ 25 ವರ್ಷ, ಉಃ ಕಿರಾಣಿ ವ್ಯಾಪಾರ, ಸಾಃ ಶಿರವಾಳ, ತಾಃ ಶಹಾಪೂರ, ಜಿಃ ಯಾದಗಿರಿ.

### ಆಪಾದನೆ

ನಾನು ಶ್ರೀಮತಿ ಹೇಮಾ ಪಸ್ತಾಪೂರ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು, ಶಹಾಪೂರ, ತಮ್ಮ ಮೇಲೆ ಆಪಾದಿಸುವುದು ಏನೆಂದರೆಃ-

ದಿನಾಂಕಃ 05-07-2025 ರಂದು ಸಾಯಂಕಾಲ ಸುಮಾರು 04.30 ಗಂಟೆಗೆ ಭೀಮರಾಯನ ಗುಡಿ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಶಿರವಾಳ ಗ್ರಾಮ ಪಂಚಾಯತ ಕಾರ್ಯಾಲಯದ ಹತ್ತಿರ ಆರೋಪಿತನಾದ ನೀವು ನಿಮ್ಮ ಕಿರಾಣಿ ಅಂಗಡಿಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಸರಕಾರದಿಂದ ಯಾವುದೇ ಪರವಾನಿಗೆಯನ್ನು ಪಡೆಯದೇ ಅನಧೀಕೃತವಾಗಿ ಸಾರ್ವಜನಿಕರಿಗೆ ಸರಾಯಿ ಮಾರಾಟ ಮಾಡಿ ಆ ಮೂಲಕ ಕಲಂ 32, 34 ಕೆ.ಇ. ಯಾಕ್ಟ್ ಅಡಿಯಲ್ಲಿ ದಂಡನೀಯ ಅಪರಾಧ ಮಾಡಿದ್ದು, ಅದು ನನ್ನ ಸಂಜ್ಞೆಯಲ್ಲಿರುತ್ತದೆ.

ಪ್ರಶ್ನೆಃ1 ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ ಅಥವಾ ಅರ್ಥವಾಯಿತೆ?

ಉತ್ತರಃ ಅರ್ಥವಾಯಿತು

ಪ್ರಶ್ನೆಃ2 ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರೋ?

ಉತ್ತರಃ ತಪ್ಪು ಮಾಡಿಲ್ಲ

(ಸದರಿ ದೋಷಾರೋಪಣಾ ಪತ್ರವನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಅವರು ಉತ್ತರಿಸಿದ ಭಾಷೆಯಲ್ಲಿ ಅವರ ಉತ್ತರಗಳನ್ನು ಬರೆಯಲಾಯಿತು ಎಂದು ದೃಡಿಕರಿಸಿದೆ )

ದಿನಾಂಕಃ 28-01-2026.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾ.ದಂ. ಶಹಾಪೂರ